# ಸಪ್ತರ್ಷಿ ರಾಮಾಯಣ

**ಡಾ. ವಾಗೀಶ್ವರೀ ಶಿವರಾಮ**

ಅಲೌಕಿಕ ಕಾವ್ಯ ರಾಮಾಯಣವು ಭಾರತದಾದ್ಯಂತ ಹಲವಾರು ಮಂದಿ ಕವಿಗಳನ್ನು ಕೃತಿರಚನೆಗೆ ಪ್ರೇರೇಪಿಸಿದೆ. ಇಂತಹ ಹಲವು ಕಾವ್ಯಗಳು ಸಹಸ್ರಾರು ವರ್ಷಗಳ ಅವಧಿಯಲ್ಲಿ ರಚಿತವಾಗಿದೆ. ಆದರೆ, ರಾಮಾಯಣ ಕಥೆಯಲ್ಲೇ ಬರುವ ಸಪ್ತರ್ಷಿಗಳು ರಾಮಾಯಣ ಕಥೆಯನ್ನು ಹೇಗೆ ಹೇಳಿದ್ದಾರೆ? ಇದಕ್ಕೆ ಈ ಲೇಖನವು ಉತ್ತರ ನೀಡುತ್ತದೆ. ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿರುವ ಅವರು ಮೂವತ್ತಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.



ಆದಿಕವಿ ವಾಲ್ಮೀಕಿ ಮಹರ್ಷಿಗಳು, ಬ್ರಹ್ಮನ ಆದೇಶದಂತೆ ರಾಮಾಯಣವನ್ನು ರಚಿಸಿ, ತಮ್ಮ ಆಶ್ರಮದಲ್ಲಿಯೇ ಬೆಳೆದು ದೊಡ್ಡವರಾಗಿದ್ದ ಲವ-ಕುಶರಿಗೆ ಆ ರಾಮಾಯಣವನ್ನು ಕಲಿಸಿದರು. ಆ ಮಕ್ಕಳೂ ನಾದಬದ್ಧವಾಗಿ ರಾಮಾಯಣದ ಗಾನ ಮಾಡುವುದನ್ನು ಅಭ್ಯಾಸಮಾಡಿಕೊಂಡಿದ್ದರು. ಮೊದಲ ಬಾರಿಗೆ ರಾಮಾಯಣದ ಗಾಯನ, ಲವ-ಕುಶರಿಂದ ವಾಲ್ಮೀಕಿಗಳ ಆಶ್ರಮದಲ್ಲೇ ನಡೆಯಿತು. ಆಗ ಅಲ್ಲಿ ನೆರೆದಿದ್ದ ಋಷಿ-ಮುನಿಗಳು, ಸುಶ್ರಾವ್ಯವಾದ ರಾಮಾಯಣದ ಕಥಾಶ್ರವಣದಿಂದ ಸಂತುಷ್ಟರಾಗಿ, ಲವ-ಕುಶರಿಗೆ ತಮ್ಮಲ್ಲಿದ್ದ ಕಮಂಡಲು, ವಲ್ಕಲ, ಕಟಿಸೂತ್ರ, ದಂಡ ಇತ್ಯಾದಿಗಳನ್ನು ಉಡುಗೊರೆಯಾಗಿ ನೀಡಿ ಹರಸಿದ್ದರು. ಲವ-ಕುಶರ ರಾಮಾಯಣ ಗಾಯನ, ಎಲ್ಲೆಡೆ ಪ್ರಖ್ಯಾತವಾಯಿತು.

ಅಯೋಧ್ಯೆಯ ರಾಜ ಶ್ರೀರಾಮನಿಗೂ ಸುದ್ದಿ ಮುಟ್ಟಿತು. ಸೀತೆಯ ಚಿನ್ನದ ಪುತ್ಥಳಿಮಾಡಿ, ಅಶ್ವಮೇಧಯಾಗವನ್ನು ಮಾಡಲು ರಾಮ ಸಂಕಲ್ಪಿಸಿದ್ದ. ಆಗ ಬಾಲಕರಿಗೂ ಗಾಯನಕ್ಕಾಗಿ ಕರೆ ಹೋಯಿತು. ಸಭೆಯಲ್ಲಿ ರಾಮನ ಮುಂದೆ, ಲವ-ಕುಶರು ೩೨ ದಿನ ರಾಮನ ಕಥೆಯನ್ನು ಗಾನ ಮಾಡಿದರು. ಸಿಂಹಾಸನದ ಮೇಲೆ ಕುಳಿತು ಕಥೆ ಕೇಳುತ್ತಿದ್ದ ರಾಮ, ಕೆಳಗಿಳಿದು ಶ್ರೋತೃಗಳ ಮಧ್ಯೆ ಕುಳಿತ. ಇದನ್ನು ಗಮನಿಸಿದ ವಸಿಷ್ಠರು, ''ಇದೇನು ರಾಮ? ನಿನ್ನ ಈ ಕಥೆ ನಿನಗೇ ತುಂಬಾ ಇಷ್ಟವಾಯಿತೆ?'' ಎಂದು ಕೇಳಿದರು. ಆಗ ಶ್ರೀರಾಮ, ''ಗುರುಗಳೇ! ಇದು ನನ್ನ ಕಥೆಯಲ್ಲ. 'ಸೀತೆಯ ಮಹತ್ವಪೂರ್ಣವಾದ ಚರಿತ್ರೆ'. (ಸೀತಾಯಾಃ ಚರಿತಂ ಮಹತ್) ಆದ್ದರಿಂದ ಮನಸೋತೆ'' ಎಂದ.

## ೧) ಶ್ರೀರಾಮಾಯಣದಲ್ಲಿ ಪಾತ್ರಧಾರಿಗಳಾಗಿರುವ ಸಪ್ತರ್ಷಿಗಳು

**ಕಶ್ಯಪೋಽತ್ರಿರ್ಭರದ್ವಾಜಃ ವಿಶ್ವಾಮಿತ್ರೋಽಥ ಗೌತಮಃ ।**
**ಜಮದಗ್ನಿಃ ವಸಿಷ್ಠಶ್ಚ ಸಪ್ತೈತೇ ಋಷಯಃ ಸ್ಮೃತಾಃ ॥**

''ಕಶ್ಯಪ, ಅತ್ರಿ , ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ ಹಾಗೂ ವಸಿಷ್ಠರು - ಈ ಏಳು ಜನ ಮಹರ್ಷಿಗಳು'' ರಾಮಾಯಣದ ಕಥಾಭಿತ್ತಿಯಲ್ಲಿ ಕಾಣಿಸಿಕೊಳ್ಳುವ ಪಾತ್ರಧಾರಿಗಳಾಗಿದ್ದಾರೆ.

ಬಾಲಕಾಂಡದಲ್ಲಿ, ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಯಾಗ ಸಂರಕ್ಷಣೆಗೆ ಕರೆದೊಯ್ದಾಗ, ಕಶ್ಯಪ-ಅದಿತಿಗಳ ಪುತ್ರನಾಗಿ ಜನಿಸಿದ ವಾಮನನ ಅವತಾರದ ಕಥೆಯನ್ನು ತಿಳಿಸುತ್ತಾರೆ. ತಾಟಕಿಯ ವಧೆ, ಯಜ್ಞಸಂರಕ್ಷಣೆಯ ಬಳಿಕ ಮಿಥಿಲೆಗೆ ಪ್ರಯಾಣ ಮಾಡುವಾಗ; ಗೌತಮರ ಆಶ್ರಮದ ಬಳಿ ಬಂದಾಗ, ಪತ್ನಿ ಅಹಲ್ಯೆಗೆ, ಗೌತಮರಿತ್ತ ಶಾಪವೃತ್ತಾಂತದ ಕಥೆಯನ್ನು ತಿಳಿಸುತ್ತಾರೆ. ಮಿಥಿಲೆಗೆ ಬಂದ ರಾಮ-ಲಕ್ಷ್ಮಣರಿಗೆ, ಗೌತಮರ ಪುತ್ರ ಶತಾನಂದ, ವಿಶ್ವಾಮಿತ್ರರ ಚರಿತ್ರೆಯನ್ನು ತಿಳಿಸುತ್ತಾನೆ.

ಮಿಥಿಲೆಯಲ್ಲಿ ತಮ್ಮ ಪುತ್ರರ ವಿವಾಹದ ಬಳಿಕ, ದಶರಥ ಅಯೋಧ್ಯೆಗೆ ಹಿಂತಿರುಗುತ್ತಿದ್ದಾಗ, ಜಮದಗ್ನಿಯ ಪುತ್ರ ಪರಶುರಾಮ (ಜಾಮದಗ್ನಿ) ಅಡ್ಡಗಟ್ಟಿ, 'ವೈಷ್ಣವ ಧನುಸ್ಸನ್ನು ಹಿಡಿದು, ಹೆದೆ ಏರಿಸಲು' ಕರೆಕೊಡುತ್ತಾನೆ. ರಾಮ ಹೆದೆ ಏರಿಸಿದಾಗ, ಪರಶುರಾಮರು ರಾಮನ ಬಾಣಕ್ಕೆ ಪುಣ್ಯಲೋಕ ಕೊಟ್ಟು, ತಾವು ತಪಸ್ಸಿಗಾಗಿ ಮಹೇಂದ್ರಪರ್ವತಕ್ಕೆ ತೆರಳುತ್ತಾರೆ.

ಅಯೋಧ್ಯಾಕಾಂಡದಲ್ಲಿ ಶ್ರೀರಾಮ ಪಿತೃವಾಕ್ಯ ಪರಿಪಾಲನೆಗಾಗಿ, ಅಯೋಧ್ಯೆಯಿಂದ ಅರಣ್ಯಕ್ಕೆ ತೆರಳುವಾಗ ಭರದ್ವಾಜ ಮುನಿಗಳ ಆಶ್ರಮಕ್ಕೆ ಬರುತ್ತಾನೆ. ಭರದ್ವಾಜರು ರಾಮ-ಸೀತೆ-ಲಕ್ಷ್ಮಣರನ್ನು ಸತ್ಕರಿಸುತ್ತಾರೆ. ಚಿತ್ರಕೂಟದಲ್ಲಿ ವಾಸಮಾಡಲು ನಿರ್ದೇಶಿಸುತ್ತಾರೆ. ಭರತನೂ, ರಾಮನನ್ನು ಹಿಂತಿರುಗಿ ಕರೆತರಲು ಸೈನ್ಯದೊಂದಿಗೆ ತೆರಳಿದಾಗ, ಭರದ್ವಾಜರನ್ನು ಭೇಟಿಯಾಗುತ್ತಾನೆ. ಅವರೂ ತಪಃ ಶಕ್ತಿಯ ಪ್ರಭಾವದಿಂದ, ಭರತನ ಎಲ್ಲಾ ಪರಿವಾರಕ್ಕೆ ಯೋಗ್ಯವಾದ ಭೋಜನಾದಿ ಸತ್ಕಾರಗಳನ್ನು ಮಾಡುತ್ತಾರೆ.

ಶ್ರೀರಾಮ ಚಿತ್ರಕೂಟದಿಂದ, ದಂಡಕಾರಣ್ಯಕ್ಕೆ ಹೋಗುವಾಗ ಮಾರ್ಗದಲ್ಲಿ ಅತ್ರಿ-ಅನಸೂಯೆಯರ ಆಶ್ರಮಕ್ಕೆ ಬರುತ್ತಾನೆ. ಅತ್ರಿಮುನಿಗಳು ಅವರನ್ನು ಸತ್ಕರಿಸುತ್ತಾರೆ. ಅನಸೂಯೆ, ಸೀತೆಗೆ ಉಡುಗೊರೆ ಕೊಟ್ಟು, ಪತಿವ್ರತಾ ಧರ್ಮ ತಿಳಿಸುತ್ತಾಳೆ.

ವಸಿಷ್ಠರು ಸೂರ್ಯವಂಶದ ಕುಲಪುರೋಹಿತರು. ದಶರಥನಿಗೆ ಸಂತಾನ ಪ್ರಾಪ್ತಿಗಾಗಿ ಮಾರ್ಗದರ್ಶನ ಮಾಡಿದವರು. ರಾಮ-ಲಕ್ಷ್ಮಣರನ್ನು ವಿಶ್ವಾಮಿತ್ರರೊಡನೆ ಯಾಗ ಸಂರಕ್ಷಣೆಗೆ ಕಳುಹಿಸಿ ಕೊಡಲು ಧೈರ್ಯ ತುಂಬಿದವರು. ರಾಮಾಯಣದ ಕಥೆಯ ಆದ್ಯಂತ ಪ್ರಮುಖ ಪಾತ್ರಧಾರಿಗಳಾಗಿ, ತಮ್ಮ ಕರ್ತವ್ಯವನ್ನು ನೆರವೇರಿಸಿದವರು.

ಈ ಸಪ್ತ ಋಷಿಗಳು ರಾಮನನ್ನು ಕಂಡು, ಆತನ ಕಥೆಯ ಪ್ರಭಾವಕ್ಕೆ ಒಳಗಾಗಿದ್ದರು.

### ೨) ರಾಮಾಯಣದ ಪ್ರತಿಕಾಂಡದ ಧ್ಯಾನ ಶ್ಲೋಕಗಳು

ಸಪ್ತರ್ಷಿಗಳು ಸಂಗ್ರಹಿಸಿ ಹೇಳಿರುವ, ರಾಮಾಯಣದ ೭ ಕಾಂಡಗಳ ಕಥೆಗಳನ್ನು ಅವಲೋಕಿಸುವ ಮೊದಲು; ಆಯಾ ಕಾಂಡವನ್ನು ಪಾರಾಯಣ ಮಾಡುವಾಗ ಪಠಿಸುವ ರಾಮನ ರೂಪ ಚಿಂತನೆಗೆ ಪೂರಕವಾಗಿರುವ ಧ್ಯಾನ ಶ್ಲೋಕಗಳನ್ನು ಅವಲೋಕಿಸೋಣ: ನಾರದರು, ವಾಲ್ಮೀಕಿಗಳಿಗೆ ಈ ಶ್ಲೋಕಗಳನ್ನು ಹೇಳಿರುವರೆಂದು ಪ್ರತೀತಿ ಇದೆ.

#### i) ಬಾಲಕಾಂಡದ ಧ್ಯಾನ ಶ್ಲೋಕ:

**ಕಾಕಪಕ್ಷಧರಂ ದೇವಂ ವನಮಾಲಾವಿಭೂಷಿತಮ್ ।**
**ಶ್ರೀರಾಮಂ ಬಾಲಕಂ ಧ್ಯಾಯೇತ್ ಬಾಲಕಾಂಡೇ ಮುನೀಶ್ವರ ।।**

'ಮುನಿಶ್ರೇಷ್ಠರಾದ ವಾಲ್ಮೀಕಿಗಳೇ! ಕಾಗೆಯ ರೆಕ್ಕೆಯಂತೆ, ಶಿರಸ್ಸಿನ ಎಡ-ಬಲಗಳಲ್ಲಿ ಶಿಖೆಯನ್ನು ಹೊಂದಿರುವ, ಹೂಮಾಲೆಯಿಂದ ಶೋಭಿಸುವ, ಬಾಲಕನಾಗಿರುವ ಶ್ರೀರಾಮನನ್ನು ಬಾಲಕಾಂಡದಲ್ಲಿ ಧ್ಯಾನಿಸಬೇಕು.'

ಶ್ರೀಕೃಷ್ಣನ ಬಾಲಲೀಲೆಗಳು ವರ್ಣಿತವಾಗಿರುವಂತೆ, ರಾಮಾಯಣದಲ್ಲಿ ರಾಮನ ಬಾಲಲೀಲೆಗಳ ವರ್ಣನೆಯಿಲ್ಲ. ಗಂಭೀರವಾದ ರಾಮನ ವ್ಯಕ್ತಿತ್ವ ರೂಪಿಸುವ ಉದ್ದೇಶದಿಂದ, ಬಾಲಲೀಲೆಗಳನ್ನು ವಾಲ್ಮೀಕಿಗಳು ಮಾಡಿಲ್ಲ. ಆದರೂ ಬಾಲಕಾಂಡದಲ್ಲಿ ಗುರುಬಲ, ವಿದ್ಯಾಬಲ, ತೋಳ್ಬಲ, ಚೆಲುವಿನ ಬಲ, ಕರ್ತವ್ಯದ ಬಲ, ಅಸ್ತ್ರಬಲ - ಹೀಗೆ ನೂರಾರು ಬಲಗಳ - ಸಮಾವೇಶ ರಾಮನಲ್ಲಿ ಕಾಣಬಹುದಾಗಿರುವುದರಿಂದ ಬಲ ಸಂಬಂಧಿ ಕಾಂಡ 'ಬಾಲಕಾಂಡ' ಎಂದು ಭಾವಿಸಿಕೊಳ್ಳಬಹುದು. ಸ್ವತಃ ಬಲವಂತನಾದ ರಾಮನ ಪರಿಚಯ ಮಾಡಿಸುವ ಕಾಂಡವಾದ್ದರಿಂದ, ಕಾಂಡದ ಹೆಸರು ಅನ್ವರ್ಥವಾಗಿದೆ.

#### ii) ಅಯೋಧ್ಯಾಕಾಂಡದ ಧ್ಯಾನಶ್ಲೋಕ :

**ಸೀತಾದೇವಿಯುತಂ ವೀರಂ ಸರ್ವಭೂಷಣಭೂಷಿತಮ್ ।**
**ಸೀತಾಪತಿಂ ಹರಿಂ ಧ್ಯಾಯೇತ್ ಅಯೋಧ್ಯಾಕಾಂಡ ಉತ್ತಮೇ ।।**

'ರಾಮಾಯಣದ ಹೃದಯ ಭಾಗವಾದ; ಅಯೋಧ್ಯಾಕಾಂಡದಲ್ಲಿ ಆಭರಣಗಳಿಂದ ಅಲಂಕೃತನಾಗಿ ಸೀತಾದೇವಿಯೊಡನೆ ಇರುವ, ವೀರನಾಗಿರುವ, ವಿಷ್ಣುವಿನ ಸ್ವರೂಪವೇ ಆಗಿರುವ ಶ್ರೀರಾಮನನ್ನು ಧ್ಯಾನಿಸಬೇಕು.'

'ರಾಮನೆಂದರೆ ಅಯೋಧ್ಯೆ, ಅಯೋಧ್ಯೆಯೆಂದರೆ ರಾಮ' ಎಂಬ ಅವಿನಾಭಾವ ಸಂಬಂಧವುಳ್ಳ ಅಯೋಧ್ಯೆಯಲ್ಲೇ ನಡೆಯುವ ಘಟನಾವಳಿಗಳುಳ್ಳ ಈ ಕಾಂಡದ ಹೆಸರು ಅನ್ವರ್ಥವಾಗಿದೆ.

#### iii) ಅರಣ್ಯಕಾಂಡದ ಧ್ಯಾನಶ್ಲೋಕ:

**ಜಟಿಲಂ ಚೀರವಸನಂ ದಂಡಕಾರಣ್ಯವಾಸಿನಮ್ ।।**
**ಮುನಿವೇಷಧರಂ ಧ್ಯಾಯೇತ್ ಅರಣ್ಯೇ ಕಾಂಡ ಉತ್ತಮೇ ।।**

'ಶ್ರೇಷ್ಠವಾದ ಅರಣ್ಯಕಾಂಡದಲ್ಲಿ, ಜಟೆ ಧರಿಸಿರುವ, ನಾರುಮುಡಿಯನ್ನು ಉಟ್ಟಿರುವ ದಂಡಕಾರಣ್ಯವಾಸಿಯಾಗಿರುವ, ಮುನಿವೇಷಧಾರಿಯಾದ ಶ್ರೀರಾಮನನ್ನು ಧ್ಯಾನಿಸಬೇಕು.'

ಈ ಕಾಂಡದಲ್ಲಿ 'ಶರಣಾಗತ ರಕ್ಷಣೆಯೇ ಪರಮಧರ್ಮ' ಎಂಬ ತತ್ತ್ವ ರಾಮನಿಂದ ಪ್ರಕಟಿತವಾಗಿದೆ. ವಿರಾಧ, ಕಬಂಧ, ಖರ-ದೂಷಣಾದಿ ರಾಕ್ಷಸರ ಉದ್ಧಾರ, ಶಬರೀ ಮೋಕ್ಷದ ಕಥೆ ಬಂದಿರುವುದರಿಂದ ಶ್ರೇಷ್ಠವೆನಿಸಿದೆ.

#### iv) ಕಿಷ್ಕಿಂಧಾಕಾಂಡದ ಧ್ಯಾನಶ್ಲೋಕ:

**ಸುಗ್ರೀವಾದಿಯುತಂ ಶ್ರೀಶಂ ಭಸ್ಮಾಂಗಾವೃತಮೀಶ್ವರಮ್ ।**
**ಮಹೇಶ್ವರಸಮಂ ಧ್ಯಾಯೇತ್ ಕಿಷ್ಕಿಂಧಾಕಾಂಡ ಉತ್ತಮೇ ।।**

‘ಶ್ರೇಷ್ಠವಾದ ಕಿಷ್ಕಿಂಧಾ ಕಾಂಡದಲ್ಲಿ, ಸುಗ್ರೀವಾದಿಗಳೊಡನೆ ಇರುವ, ರಾಜ್ಯಸಂಪತ್ತನ್ನು ಕೊಡಿಸಿರುವ, ಭಸ್ಮಧಾರಿಯಾದ, ಶಿವನಿಗೆ ಸಮನಾದ, ಬಲಶಾಲಿಗಳಿಗೆ ಒಡೆಯನಾದ ಶ್ರೀರಾಮನನ್ನು ಧ್ಯಾನಿಸಬೇಕು.’ ಕಪಿಕುಲದ ಮೂಲಪುರುಷ ‘ಕಿಷ್ಕಿ’ ಸ್ಥಾಪಿಸಿದ ರಾಜ್ಯದಲ್ಲಿ, ಸಂಕಟದ ಸ್ಥಿತಿಯಲ್ಲಿರುವ ನರ-ವಾನರರ ಸಖ್ಯದ ಮೂಲಕ-ನಡೆಯುವ ಮಹತ್ ಕಾರ್ಯಗಳಿಗೆ ನಾಂದಿ ಹಾಡಿರುವ ಕಾರಣದಿಂದ ‘ಕಿಷ್ಕಿಂಧಾಕಾಂಡ’ ಶ್ರೇಷ್ಠವೆನಿಸಿದೆ.

v) ಸುಂದರಕಾಂಡದ ಧ್ಯಾನಶ್ಲೋಕ:

**ಚಂದ್ರಬಿಂಬಸಮಾಕಾರಂ ವಾಂಚಿತಾರ್ಥಪ್ರದಾಯಕಮ್ ।**
**ಹನುಮತ್‌ಸೇವಿತಂ ಧ್ಯಾಯೇತ್ ಸೌಂದರೇ ಕಾಂಡ ಉತ್ತಮೇ ॥**

‘ಸುಂದರಕಾಂಡದಲ್ಲಿ, ಚಂದ್ರನಂತೆ ಸುಂದರವಾದ ಮುಖವುಳ್ಳ, ಇಷ್ಟಾರ್ಥಗಳನ್ನು ಕರುಣಿಸುವ, ಹನುಮಂತನಿಂದ ಸೇವಿಸಲ್ಪಡುವ ಶ್ರೀರಾಮನನ್ನು ಧ್ಯಾನಿಸಬೇಕು.’ ಸೀತಾ-ರಾಮರ ಮಾನಸಿಕ ಸಮಾಗಮವನ್ನು ಉಂಟುಮಾಡುವ ಸುಂದರ ಸನ್ನಿವೇಶವನ್ನು, ಸುಂದರನಾದ ಆಂಜನೇಯನು ಸಾಧಿಸಿದ ಕಾಂಡವಾದ್ದರಿಂದ ಇದು ‘ಸುಂದರಕಾಂಡ’ ಎನಿಸಿದೆ.

vi) ಯುದ್ಧಕಾಂಡದ ಧ್ಯಾನಶ್ಲೋಕ

**ರಾವಣಾದಿ-ನಿಹಂತಾರಂ ಶ್ರೀರುದ್ರಾದಿ ಸೇವಿತಮ್ ।**
**ಸೀತಾದೇವಿಯುತಂ ಯೌದ್ಧೇ ರಾಮಂ ಧ್ಯಾಯೇತ್ ಹೃದಂಬುಜೇ ॥**

‘ಯುದ್ಧಕಾಂಡದಲ್ಲಿ, ರಾವಣನೇ ಮೊದಲಾದ ರಾಕ್ಷಸರನ್ನು ಸಂಹರಿಸಿರುವ ಶಿವನೇ ಮೊದಲಾದವರಿಂದ ಸೇವಿಸಲ್ಪಡುವ, ಸೀತಾದೇವಿಯೊಡನೆ ಇರುವ ಶ್ರೀರಾಮನನ್ನು ಹೃದಯಕಮಲದಲ್ಲಿ ಧ್ಯಾನಿಸಬೇಕು.’

ಧರ್ಮದ ಎದುರಿಗೆ ಅಧರ್ಮ ನಿಲ್ಲದು. ತ್ಯಾಗದಿಂದಲೇ ಧರ್ಮದ ರಕ್ಷಣೆ ಎಂಬ ತತ್ತ್ವವನ್ನು ಎತ್ತಿಹಿಡಿದಿರುವ, ಸಾಧ್ವಿಯ ಮಾನರಕ್ಷಣೆಗಾಗಿ ಜೀವದ ಹಂಗಿಲ್ಲದೆ ಹೋರಾಡಿದ ಕಪಿವೀರರ ಸಾಹಸದ ಗಾಥೆಯುಳ್ಳ ಕಾಂಡವಾದ್ದರಿಂದ ‘ಯುದ್ಧಕಾಂಡ’ ಎನಿಸಿದೆ.

ರಾಮಾಯಣದ ಪಾರಾಯಣ, ಯುದ್ಧಕಾಂಡದ ಪಾರಾಯಣದೊಡನೆ ಮಂಗಳವಾಗುವ ಸಂಪ್ರದಾಯ ಪ್ರಚಲಿತವಾಗಿದೆ.

## ೩.) ಸಪ್ತರ್ಷಿಗಳ ರಾಮಾಯಣದ ಚಿಂತನಾ ಸಭೆ

ಒಮ್ಮೆ ಕಶ್ಯಪರೇ ಮೊದಲಾದ ಸಪ್ತ-ಋಷಿಗಳು ಒಟ್ಟಿಗೆ ಸೇರಿ, ಸಂಪೂರ್ಣ ರಾಮಾಯಣದ ಚಿಂತನೆ ನಡೆಸಿದರು. ಅನಂತರ ೭ ಕಾಂಡದ ಕಥೆಯಸಾರವನ್ನು ಒಬ್ಬೊಬ್ಬರು, ಒಂದೊಂದು ಶ್ಲೋಕದಲ್ಲಿ ಸಂಗ್ರಹಿಸಿ ಹೇಳೋಣ ಎಂದು ನಿಶ್ಚಯಿಸಿಕೊಂಡರು. ಆ ಏಳೂ ಋಷಿಗಳು ರಚಿಸಿರುವ, ಕಾಂಡದ ಕಥಾಸಾರವನ್ನು ತಿಳಿಸುವ ಶ್ಲೋಕಗಳನ್ನು ಅನುಸಂಧಾನ ಮಾಡೋಣ.

i) ಕಶ್ಯಪರು ರಚಿಸಿದ ಬಾಲಕಾಂಡದ ಕಥಾಸಾರ:

**ಜಾತಃ ಶ್ರೀರಘುನಾಯಕೋ ದಶರಥಾತ್ ಮುನ್ಯಾಶ್ರಮಾತ್ತಾಟಕಾಮ್**
**ಹತ್ವಾ ರಕ್ಷಿತಕೌಶಿಕಕ್ರತುವರಃ ಕೃತ್ವಾ ಅಹಲ್ಯಾಂ ಶುಭಾಮ್।**
**ಭಂಕ್ತ್ವಾ ರುದ್ರಶರಾಸನಂ ಜನಕಜಾಂ ಪಾಣೌ ಗೃಹೀತ್ವಾ ತತಃ ।**
**ಜಿತ್ವಾರ್ಧಾಧ್ವನಿ ಭಾರ್ಗವಂ ಪುನರಗಾತ್ ಸೀತಾಸಮೇತಃ ಪುರೀಮ್॥೧॥**

‘ಶ್ರೀರಾಮನು ದಶರಥನ ಮಗನಾಗಿ ಜನಿಸಿದನು. ವಿಶ್ವಾಮಿತ್ರಮುನಿಗಳ ಆಶ್ರಮದಲ್ಲಿ ಪೀಡೆಯನ್ನು ಉಂಟುಮಾಡುತ್ತಿದ್ದ ತಾಟಕಿಯನ್ನು ಕೊಂದು ಮುನಿಗಳ ಯಜ್ಞವನ್ನು ರಕ್ಷಿಸಿದನು. ಅಹಲ್ಯೆಯ ಶಾಪವಿಮೋಚನೆಯನ್ನು ಮಾಡಿದನು. ಅನಂತರ ಶಿವಧನುಸ್ಸನ್ನು ಮುರಿದು ಸೀತೆಯನ್ನು ವಿವಾಹವಾದನು. ಮಾರ್ಗದ ಮಧ್ಯದಲ್ಲಿ ಪರಶುರಾಮನನ್ನು ಸೋಲಿಸಿ, ಸೀತೆಯೊಡನೆ ಅಯೋಧ್ಯೆಗೆ ಹಿಂತಿರುಗಿದನು.’

ii) ಅತ್ರಿಗಳು ರಚಿಸಿದ ‘ಅಯೋಧ್ಯಾಕಾಂಡದ’ ಕಥಾಸಾರ:

**ದಾಸ್ಯಾ ಮಂಥರಯಾ ದಯಾರಹಿತಯಾ ದುರ್ಬೋಧಿತಾ ಕೈಕಯೀ**
**ಶ್ರೀರಾಮ-ಪ್ರಥಮಾಭೀಷೇಕಸಮಯೇ ಮಾತಾಪ್ಯಯಾಚದ್ ವರೌ ।**
**ಭರ್ತಾರಂ ಭರತಃ ಪ್ರಶಾಸ್ತು ಧರಣೀಂ, ರಾಮೋ ವನಂ ಗಚ್ಛತಾತ್।**
**ಇತ್ಯಾಕರ್ಣ್ಯ ಸ ಚೋತ್ತರಂ ನ ಹಿ ದದೌ ದುಃಖೇನ ಮೂರ್ಛಾಂ ಗತಃ ॥೨॥**

‘ದಯೆ ಇಲ್ಲದ ದಾಸಿ ಮಂಥರೆ, ಕೈಕೇಯಿಗೆ ದುರ್ಬೋಧನೆಯನ್ನು ಮಾಡಿದಳು. ಶ್ರೀರಾಮನ ಪಟ್ಟಾಭಿಷೇಕದ ಸಂದರ್ಭದಲ್ಲಿ ಮಲತಾಯಿ ಕೈಕೇಯಿಯು ಗಂಡನನ್ನು, ‘ಭರತನು ರಾಜ್ಯವಾಳಲಿ, ಶ್ರೀರಾಮನು ಕಾಡಿಗೆ ಹೋಗಲಿ’ ಎಂಬ ಎರಡು ವರಗಳನ್ನು ಬೇಡಿದಳು. ಇದನ್ನು ಕೇಳಿದ ದಶರಥ ರಾಜನು ಏನೂ ಉತ್ತರಗಳನ್ನು ಕೊಡದೆ, ದುಃಖದಿಂದ ಮೂರ್ಛೆ ಹೋದನು.’

iii) ಭರದ್ವಾಜ ಮುನಿಗಳು ರಚಿಸಿದ ಅರಣ್ಯಕಾಂಡದ ಕಥಾಸಾರ

**ಶ್ರೀರಾಮಃ ಪಿತೃಶಾಸನಾತ್ ವನಮಗಾತ್ ಸೌಮಿತ್ರಿ-ಸೀತಾನ್ವಿತಃ ।**
**ಗಂಗಾಂ ಪ್ರಾಪ್ಯ ಜಟಾಂ ನಿಬಧ್ಯ ಸ ಗುಹಃ ಸಚ್ಚಿತ್ರಕೂಟೇ ವಸನ್ ॥**
**ಕೃತ್ವಾ ತತ್ರ ಪಿತೃಕ್ರಿಯಾಂ ಸಭರತಃ ದತ್ವಾऽಭಯಂ ದಂಡಕೇ**
**ಪ್ರಾಪ್ಯಾಗಸ್ತ್ಯ ಮುನೀಶ್ವರಂ ತದುದಿತಂ ಧೃತ್ವಾಧನುಶ್ಚಾಕ್ಷಯಮ್ ॥ ೩ ॥**

‘ಶ್ರೀರಾಮನು ತಂದೆಯ ಆಜ್ಞೆಯಂತೆ, ಸೀತೆ ಹಾಗೂ ಲಕ್ಷ್ಮಣರೊಡನೆ ಕಾಡಿಗೆ ಹೋದನು. ಗಂಗಾನದಿಯ ಬಳಿಗೆ ಹೋಗಿ, ಜಟಾಧಾರಿಯಾಗಿ ಗುಹನನ್ನು ಭೇಟಿಯಾದನು. ಮನೋಹರವಾದ ಚಿತ್ರಕೂಟದಲ್ಲಿ ವಾಸಮಾಡಿದನು. ಅಲ್ಲಿ ಭರತನೊಂದಿಗೆ ಪಿತೃಕಾರ್ಯವನ್ನು ಮಾಡಿದನು. ಮುನಿಗಳಿಗೆ ಅಭಯವನ್ನಿತ್ತು, ದಂಡಕಾರಣ್ಯಕ್ಕೆ ತೆರಳಿದನು. ಅಲ್ಲಿ ಅಗಸ್ತ್ಯಮುನಿಗಳು ನೀಡಿದ ನಾಶವಾಗದ ಧನುಸ್ಸನ್ನು ಪಡೆದನು.’

iv) ವಿಶ್ವಾಮಿತ್ರ ಮುನಿಗಳು ರಚಿಸಿದ ಕಿಷ್ಕಿಂಧಾಕಾಂಡದ ಕಥಾಸಾರ

**ಗತ್ವಾ ಪಂಚವಟೀಂ ಅಗಸ್ತ್ಯವಚನಾತ್ ದತ್ವಾऽಭಯಂ ಮೌನಿನಾಮ್ ।**
**ಛಿತ್ವಾ ಶೂರ್ಪನಖಾಸ್ಯ-ಕರ್ಣಯುಗಲಂ ತ್ರಾತುಂ ಸಮಸ್ತಾನ್ ಮುನೀನ್ ।**
**ಹತ್ವಾ ತಂ ಚ ಖರಂ ಸುವರ್ಣಹರಿಣಂ ಭಿತ್ವಾ ತಥಾ ವಾಲಿನಂ ।**
**ತಾರಾರತ್ನಮವೈರಿರಾಜ್ಯಮಕರೋತ್ ಸರ್ವಂ ಚ ಸುಗ್ರೀವಸಾತ್ ॥**

'ಶ್ರೀರಾಮನು, ಅಗಸ್ತ್ಯರ ಸಲಹೆಯಂತೆ ಪಂಚವಟಿಗೆ ತೆರಳಿದನು. ಅಲ್ಲಿ ಮುನಿಗಳಿಗೆ ಅಭಯವನ್ನು ನೀಡಿದನು. ಶೂರ್ಪಣಖೆಯ ಮೂಗು ಕಿವಿಗಳನ್ನು ಕತ್ತರಿಸಿದನು. ಎಲ್ಲಾ ಮುನಿಗಳ ರಕ್ಷಣೆಗಾಗಿ ಖರನೆಂಬ ರಾಕ್ಷಸನನ್ನು ಸಂಹರಿಸಿದನು. ಚಿನ್ನದ ಜಿಂಕೆಯ ರೂಪದಲ್ಲಿದ್ದ ಮಾರೀಚನನ್ನು ಕೊಂದು ವಾಲಿಯನ್ನು ವಧಿಸಿದನು. ಶ್ರೇಷ್ಠಳಾದ ತಾರೆಯನ್ನು ಹಾಗೂ ಶತ್ರುಗಳಿಲ್ಲದ ಸಮಸ್ತ ಕಿಷ್ಕಿಂಧಾ ರಾಜ್ಯವನ್ನು ಸುಗ್ರೀವನಿಗೆ ಒಪ್ಪಿಸಿದನು.'

### v) ಗೌತಮಮುನಿಗಳು ರಚಿಸಿದ ಸುಂದರಕಾಂಡದ ಕಥಾಸಾರ

**ದೂತೋ ದಾಶರಥೇಃ ಸಲೀಲಮುದಧಿಂ ತೀರ್ತ್ವಾ ಹನುಮಾನ್ ಮಹಾನ್**
**ದೃಷ್ಟ್ವಾಽಶೋಕವನೇ ಸ್ಥಿತಾಂ ಜನಕಜಾಂ ದತ್ವಾಂಗುಲೀಮುದ್ರಿಕಾಮ್ ।**
**ಅಕ್ಷಾದೀನಸುರಾನ್ ನಿಹತ್ಯ ಮಹತೀಂ ಲಂಕಾಂ ಚ ದಗ್ಧ್ವಾ ಪುನಃ**
**ಶ್ರೀರಾಮಂ ಚ ಸಮೇತ್ಯ ದೇವ ಜನನೀ ದೃಷ್ಟಾ ಮಯೇತ್ಯಬ್ರವೀತ್ ॥**

'ಶ್ರೀರಾಮನ ದೂತನಾದ ಹನುಮಂತನು, ಸುಲಭವಾಗಿ ಸಮುದ್ರವನ್ನು ದಾಟಿ, ಲಂಕೆಯಲ್ಲಿ ಅಶೋಕವನದಲ್ಲಿದ್ದ ಸೀತೆಯನ್ನು ಕಂಡನು. ಶ್ರೀರಾಮನ ಮುದ್ರೆಯ ಉಂಗುರವನ್ನು ಅವಳಿಗೆ ಕೊಟ್ಟು, ಅಕ್ಷಕುಮಾರನೇ ಮೊದಲಾದ ರಾಕ್ಷಸರನ್ನು ಕೊಂದನು. ವಿಶಾಲವಾದ ಲಂಕೆಯನ್ನು ಸುಟ್ಟನು. ಶ್ರೀರಾಮನ ಬಳಿಗೆ ಬಂದು, ''ಪ್ರಭುವೇ ನಾನು ಸೀತಾಮಾತೆಯನ್ನು ನೋಡಿದೆ'' ಎಂದು ಹೇಳಿದನು.'

### vi) ಜಮದಗ್ನಿ ಮುನಿಗಳು ರಚಿಸಿದ ಯುದ್ಧಕಾಂಡದ ಸಾರ

**ರಾಮೋ ಬದ್ಧ-ಪಯೋನಿಧಿಃ ಕಪಿವರೈಃ ವೀರೈಃ ನಲಾದ್ಯೈರ್ವೃತೋ**
**ಲಂಕಾಂ ಪ್ರಾಪ್ಯ ಸಕುಂಭಕರ್ಣ-ತನುಜಂ ಹತ್ವಾ ರಣೇ ರಾವಣಮ್।**
**ತಸ್ಯಾಂ ನ್ಯಸ್ಯ ವಿಭೀಷಣಂ ಪುನರಸೌ ಸೀತಾಪತಿಃ ಪುಷ್ಪಕಾ-**
**ರೂಢಃ ಸನ್ ಪುರಮಾಗತಃ ಸಭರತಃ ಸಿಂಹಾಸನಸ್ಥೋ ಬಭೌ ॥**

'ಶ್ರೀರಾಮನು ನಳ ಮೊದಲಾದ ಶ್ರೇಷ್ಠರಾದ ಕಪಿವೀರರೊಡನೆ ಸಮುದ್ರಕ್ಕೆ ಸೇತುವೆಯನ್ನು ನಿರ್ಮಿಸಿದನು. ಲಂಕೆಯನ್ನು ತಲುಪಿ, ಕುಂಭಕರ್ಣ, ರಾವಣಪುತ್ರ ಇಂದ್ರಜಿತ್ ಹಾಗೂ ರಾವಣ ಮೊದಲಾದ ರಾಕ್ಷಸರನ್ನು ಯುದ್ಧದಲ್ಲಿ ಕೊಂದನು. ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಗಟ್ಟಿದನು. ಪುಷ್ಪಕ ವಿಮಾನವನ್ನೇರಿ ಸೀತೆಯೊಂದಿಗೆ ಅಯೋಧ್ಯೆಗೆ ಆಗಮಿಸಿದನು. ಭರತನನ್ನು ಯುವರಾಜನನ್ನಾಗಿ ಮಾಡಿ, ತಾನು ಪಟ್ಟಾಭಿಷಿಕ್ತನಾಗಿ ಶೋಭಿಸಿದನು.'

### vii) ವಸಿಷ್ಠಮುನಿಗಳು ರಚಿಸಿದ ಉತ್ತರ ಕಾಂಡದ ಕಥಾಸಾರ

**ಶ್ರೀರಾಮೋ ಹಯಮೇಧ ಮುಖ್ಯ-ಮಖಕೃತ್ ಸಮ್ಯಕ್ ಪ್ರಜಾಃ ಪಾಲಯನ್**
**ಕೃತ್ವಾ ರಾಜ್ಯಮಥಾನುಜೈಶ್ಚ ಸುಚಿರಂ ಭೂರಿ ಸ್ವಧರ್ಮಾನ್ವಿತಃ ।**
**ಪುತ್ರೌ ಭ್ರಾತೃಸಮನ್ವಿತೌ ಕುಶಲವೌ ಸಂಸ್ಥಾಪ್ಯ ಭೂಮಂಡಲೇ ।**
**ಸೋಽಯೋಧ್ಯಾಪುರವಾಸಿಭಿಶ್ಚ ಸರಯೂ ಸ್ನಾತಃ ಪ್ರಪೇದೇ ದಿವಮ್ ।**

'ಶ್ರೀರಾಮನು ಅಶ್ವಮೇಧವೇ ಮೊದಲಾದ ದೊಡ್ಡ ದೊಡ್ಡ ಯಜ್ಞಗಳನ್ನು ಮಾಡಿ, ಪ್ರಜೆಗಳನ್ನು ಚೆನ್ನಾಗಿ ಪಾಲಿಸಿದನು. ದೀರ್ಘಕಾಲದವರೆಗೆ ತನ್ನ ಸಹೋದರರೊಡನೆ ರಾಜ್ಯಭಾರವನ್ನು ಮಾಡಿದನು. ಸ್ವಧರ್ಮ ಪಾಲನೆಯಲ್ಲಿ ನಿರತರಾಗಿದ್ದ ಪುತ್ರರಾದ ಲವಕುಶರನ್ನು, ತಮ್ಮಂದಿರೊಡನೆ ರಾಜ್ಯಭಾರದ ಕಾರ್ಯದಲ್ಲಿ ತೊಡಗಿಸಿದನು. ಅಯೋಧ್ಯೆಯ ನಿವಾಸಿಗಳೊಡನೆ ಸರಯೂ ನದಿಯಲ್ಲಿ ಸ್ನಾನ ಮಾಡಿ, ಸ್ವರ್ಗವನ್ನು ಪ್ರವೇಶಿಸಿದನು.'

### viii) ಸಪ್ತರ್ಷಿಗಳು ಒಟ್ಟಾಗಿ ರಚಿಸಿದ ಮಂಗಲ ಶ್ಲೋಕ

**ಶ್ರೀರಾಮಸ್ಯಕಥಾ ಸುಧಾತಿಮಧುರಾನ್ ಶ್ಲೋಕಾನಿಮಾನುತ್ತಮಾನ್**
**ಯೇ ಶೃಣ್ವಂತಿ ಪಠಂತಿ ಚ ಪ್ರತಿದಿನಂ ತೇಽಘೌಘವಿಧ್ವಂಸಿನಃ ।**
**ಶ್ರೀಮಂತೋ ಬಹುಪುತ್ರ-ಪೌತ್ರಸಹಿತಾ ಭುಂಕ್ತ್ವೇಹ ಭೋಗಾನ್ ಚಿರಮ್ ।**
**ಭೋಗಾಂತೇ ತು ಸದಾರ್ಚಿತಂ ಸುರಗಣೈಃ ವಿಷ್ಣೋರ್ಲಭಂತೇ ಪದಮ್ ॥**

'ಶ್ರೀರಾಮನ ಕಥೆಯನ್ನು ವರ್ಣಿಸುವ ಈ ಶ್ಲೋಕಗಳು ಅಮೃತಕ್ಕಿಂತಲೂ ಸವಿಯಾಗಿವೆ. ಇವುಗಳನ್ನು ಪ್ರತಿನಿತ್ಯ ಕೇಳುವವರ ಹಾಗೂ ಓದುವವರ ಎಲ್ಲಾ ಪಾಪಗಳೂ ನಾಶವಾಗುತ್ತವೆ. ಅವರು ಶ್ರೀಮಂತರಾಗಿ ತುಂಬಾ ಮಕ್ಕಳು, ಮೊಮ್ಮಕ್ಕಳನ್ನು ಹೊಂದಿ, ಈ ಭೂಲೋಕದಲ್ಲಿಯೇ ದೀರ್ಘಕಾಲದವರೆಗೆ ಸುಖ ಭೋಗಗಳನ್ನು ಅನುಭವಿಸಿ, ಕೊನೆಗೆ ಎಲ್ಲ ದೇವತೆಗಳಿಂದಲೂ ಪೂಜೆಗೊಳ್ಳುತ್ತಿರುವ ಶ್ರೀಮಹಾವಿಷ್ಣುವಿನ ಸ್ಥಾನವನ್ನು ಪಡೆಯುವರು.'

ಪರಂಪರೆಯಲ್ಲಿ ಬಂದಿರುವ ಏಕಶ್ಲೋಕೀ ರಾಮಾಯಣದೊಂದಿಗೆ ಈ ರಾಮಚಿಂತನೆಗೆ ಮಂಗಳ ಹೇಳೋಣ:

**ಪೂರ್ವಂ ರಾಮ ತಪೋವನಾದಿ ಗಮನಂ ಹತ್ವಾ ಮೃಗಂ ಕಾಂಚನಮ್**
**ವೈದೇಹೀ ಹರಣಂ ಜಟಾಯುಮರಣಂ ಸುಗ್ರೀವ ಸಂಭಾಷಣಂ ।**
**ವಾಲೀ ನಿಗ್ರಹಣಂ ಸಮುದ್ರತರಣಂ ಲಂಕಾಪುರೀದಾಹನಂ**
**ಪಶ್ಚಾದ್ರಾವಣ-ಕುಂಭಕರ್ಣಹನನಂ ಏತದ್ಧಿ ರಾಮಾಯಣಮ್ ॥**

'ಶ್ರೀರಾಮ ತಪೋವನಕ್ಕೆ ತೆರಳುವುದು, ಮಾಯಾಜಿಂಕೆಯನ್ನು ಸಂಹರಿಸುವುದು, ಸೀತೆಯ ಅಪಹರಣ, ಜಟಾಯುವಿನ ಮರಣ, ಸುಗ್ರೀವ ಸಖ್ಯ , ವಾಲಿಯ ಮೋಕ್ಷ, ಸಮುದ್ರಕ್ಕೆ ಸೇತುವೆ ನಿರ್ಮಾಣ, ಲಂಕೆಯ ದಹನ, ರಾವಣ-ಕುಂಭಕರ್ಣಾದಿಗಳ ವಧೆ – ಇವುಗಳೇ ರಾಮಾಯಣದ ಕಥಾಸಾರ.'

ಮನೋಜಪವೇ ಸರ್ವಶ್ರೇಷ್ಠ. ಮಾಲೆ ಹಿಡಿದು ಜಪ ಮಾಡುವುದು ಒಳ್ಳೆಯದು; ಕೈಬೆರಳು ಎಣಿಸಿ ಜಪ ಮಾಡುವುದು ಅದಕ್ಕಿಂತಲೂ ಒಳ್ಳೆಯದು. ಎಲ್ಲಕ್ಕಿಂತಲೂ ಮನಸ್ಸಿನಲ್ಲಿಯೇ ಜಪ ಮಾಡುವುದು ಸರ್ವಶ್ರೇಷ್ಠ. ಮನಸ್ಸಿನಲ್ಲಿಯೇ ಈಶ್ವರನಾಮ ಜಪ ಮಾಡುವುದು ಸರ್ವೋತ್ಕೃಷ್ಟ. ಜಪ ಮಣಿ ಅಥವಾ ಬೆರಳ ತುದಿ ಎಣಿಸಿ ಜಪ ಮಾಡುವಾಗ ಮನಸ್ಸಿನ ಗಮನ ಲೆಕ್ಕದ ಕಡೆಗೆ ಹೋಗುವುದು ಅನಿವಾರ್ಯ. ಇದರಿಂದ ಪೂರ್ಣ ಮನಸ್ಸನ್ನು ಜಪದ ಕಡೆಗೆ ಕೊಡಲಾಗುವುದಿಲ್ಲ. — ಸ್ವಾಮಿ ಶಿವಾನಂದ